ಇಸ್ತಿಹಾರ್‌ನಾಮೆ.

ಕೊಪ್ಪ್ಲೀಸಬೇಟೆ ಸಬ್ ಡಿವೀಜ್ ಆಫೀಸಿನಿಂದ.

ಮಾಗಡಿ ತಾಲ್ಲೂಕು ಐಮಂಗುತ್ತಾ ಕೆಂಪಾಪುರದ ಗ್ರಾಮದ ರೈತರಿಗೆ, ಐಮಂಗುತ್ತಿಗೆದಾರಿಗೆ ಸಹಿತ ತಿಳಿಯಪಡಿಸುವದೇನಂದರೆ,

ಮಾಗಡಿ ತಾಲ್ಲೂಕು ಕೆಂಪಾಪುರದ ಗ್ರಾಮ ಸರ್ವೆ ನಟ್ಟ ಮೆಂಟ್ ಲೆಗ್ಯೆ 1896ನೇ ಇಸವಿ ಜೂನ್ ತಾರೀಖು 15ರಲ್ಲಿ ಸೋಲೂರು ಪೊಕ್ಕಾಂನಲ್ಲಿ ಗೊತ್ತು ಮಾಡಿ ಯಿರುವದರಿಂದ ಸದರೀ ತಾರೀಖಿನಲ್ಲಿ ಈ ಗ್ರಾಮದ ರೈತರು ಮತ್ತು ತಕರಾರುದಾರ್ರು, ಗುತ್ತಿಗೆದಾರ್ರು ಮತ್ತು ಯಿರತಕ್ಕ ಸಂಬಂಧಪಟ್ಟ ವಿಶಿಷ್ಟರೂ ನನ್ನು ರೂಬರೂ ಹಾಜರಾಗಿ ಅವರವರ ತಕರಾರುಗಳನ್ನ ತಿಳಿಸಿಕೊಳ್ಳಬೇಕು. ಹಾಗೆ ಹಾಜರು ಆಗದೆ ತಪ್ಪಿದರೆ ಸದರೀ ವ್ಯಾಳೆ ಹಾಜರಿದ್ದು ವೊಪ್ಪಿದರೆ ಹ್ಯಾಗೋ ಆದೀರೀತೀಲಿ ಫೈಸಲ್ಮಾಡುವದು. ನಂತರ ಬರುವ ತಕರಾರು ಗಳು ಅಂಗೀಕರಿಸಲಾಗದು.

ಎತಾರೀಖು 18ನೇ ಮೇ 1896ನೇ ಇಸವಿ.

ಕೆ. ಏ. ಪುಟ್ಟಣ್ಣಚೆಟ್ಟಿ,
ಸಬ್ ಡಿವಿಜ್ ಆಫಿಸರ್.

ಕೋಲಾರ್ ಡಿಸ್ಟ್ರಿಕ್ಟ್.

ತಾರೀಖು 13ನೇ ಏಪ್ರಿಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

I. ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್ ಡಿವಿಜನಿಗೆ ಕೀರದ ಗೋರೀಪಿದನೂರು ತಾಲ್ಲೂಕಿನಲ್ಲಿ ಆಫಿಷಿಯಲ್ ಸಾಲ್ ಅಂದರೆ 1896ನೇ ಇಸವಿ ಜುಲೈ ಲಾಗಾಯತು 1897ನೇ ಇಸವಿ ಜೂನ್ ಆಖೈರಿವರಿಗೆ ಕುರಂಗದ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕುದಾರಿಯನ್ನ ಸದರಿ ತಾಲ್ಲೂಕು ಕಛೇರಿಯಲ್ಲಿ 1896ನೇ ಇಸವಿ ಮೇ ಮಾಹೆ 28ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

II. ಸದರಿ ಹರಾಜು ಸದರಿ ತಾರೀಖು ದಿವಿ 11 ಘಂಟೆಗೆ ಅಮಲ್‌ದಾರ್ ಯಾ ಶಿರಸ್ತೇದಾರ್ರಿಂದರಾಗಲಿ ಹರಾಜು ಪ್ರಾರಂಭ ಮಾಡಲ್ಪಡುವರು.

III. ಸದರಿ ಹರಾಜು ಚಿಕ್ಕಬಳ್ಳಾಪುರ ಸಬ್ ಡಿವಿಜ್ ಆಫಿಸರವರ ಮಂಜೂರಾತಿಗೆ ವಳಪಟ್ಟದ್ದಾಗಿರುತ್ತೆ.

IV. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಅಥವಾ ಮತ್ತೊಬ್ಬ ರಿಗೋಸ್ಕರ ಸವಾಲ್ ಮಾಡುತ್ತಾರೆಯೇ ನಮೂದಿಸಬೇಕು ಮತ್ತೊಬ್ಬರಿಗೋಸ್ಕರವಾದರೆ ಅಂಥಾವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನ ಅಂದರೆ ಅವರ ದಸ್ಕತ್ತು ಇರತಕ್ಕ ಕಾಗದವನ್ನ ಹಾಜರ್ಮಾಡಬೇಕು ಇಲ್ಲವಾದರೆ ಅಂಥಾವರ ಸವಾಲನ್ನ ಅಂಗೀಕರಿಸುವದಿಲ್ಲ.

ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗು ಡಿಪಾಜಿಟ್ ಇಡಬೇಕು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಕ್ರಯದ ಮೊಬಲಗ್ ಮೇಲೆ ರೂಪಾಯಿ 1ಕ್ಕೆ 1 ಆಣೆ ಮೇರಿಗೆ ಆಗುವ ಲೋಕಲ್‌ಸೆಸ್ ಬೇಬೇಲ್ ಬಾಕಿ ಮೊಬಲಗನ್ನ ಪಾವತಿ ಮಾಡಬೇಕು ಹಾಗೆ ಡಿ ಪಾಜಿಟ್ ಮೊಬಲಗೇ ಆಗಲಿ ಪೂರಾ ಮೊಬಲಗೇ ಆಗಲಿ ಕೊಡದೆ ತಪ್ಪಿದರೆ ಡಿಪಾಜಿಟ್ ಮೊಬಲಗು ಕೊಟ್ಟು ಬಾಕಿ ಮೊಬಲಗು ಕೊಡದೆ ತಪ್ಪಿದರೆ ಡಿಪಾಜಿಟ್ ಮೊಬಲಗು ದಂಡವಾಗಿ ಸರಕಾರಕ್ಕೆ ಸೇರಿಸಿಕೊಂಡು ಹರಾಜು ಹಕ್ಕುದಾರಿಯನ್ನು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲಕ್ಸಾನಿಗೂ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕಲ್ಲುಗಳನ್ನ ಅವನ ಅನುಮತಿ ಕಿವಾಯಿ ತೆಗದುಕೊಳ್ಳಕೂಡದು ಈ ಜಮೀನಿನ ಹಿಡುವಳಿದಾರನಾದರೂ ಸ್ವಂತ ಪುಪಯೋಗಕ್ಕೋಸ್ಕರವಾಗಿ ಜಮಾಯಿಸತಕ್ಕದ್ದಲ್ಲ ಆದರೆ ಜಮಾಯಿಸತಕ್ಕ ಕಲ್ಲುಗಳನ್ನ ಇಜಾರೇದಾರನಿಗೆ ಕೊಡಬೇಕೇ ಹೊರ್ತು ಮತ್ತೊಬ್ಬರಿಗೆ ಕೊಡತಕ್ಕದ್ದಲ್ಲ.

ಇಜಾರೆದಾರನು ಹುಲ್ಲುಬನ್ನಿ ಇಜಾರೆದಾರನ ಚರಾವ್ ಹಕ್ಕಿನಲ್ಲಿ ಪ್ರವೇಶಿಸಕೂಡದು ಇಜಾರೆದಾರನಿಗೆ ಇಜಾರೆ ಮಾಡಿಕೊಂಡು ಇರುವ ಪ್ರದೇಶದಲ್ಲಿ ಇರತಕ್ಕ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕು ಮಾತ್ರ ಇರತಕ್ಕದ್ದಾಗಿರುತ್ತೆ ಪರಂತು ಬಂಜರು ಜಮೀನು ಗಳನ್ನ ಸಾಗುವಳಿ ಲೆಗ್ಯೆ ಕೊಡುವದಕ್ಕೋಸ್ಕರ ಬರುವ ದರಖಾಸ್ತುಗಳಿಗೆ ಇಜಾರೆದಾರನ ಅಭ್ಯಂತರವೇನೂ ಇಲ್ಲ.

ಇಜಾರೆದಾರನು ಕಲ್ಲುಗಳಿಗೋಸ್ಕರ ಜಮೀನುಗಳನ್ನ ಅಗಿಯಕೂಡದು ಬಂದು ವ್ಯಾಳೆ ಆಗದಲ್ಲಿ ಸಾಗುವಳಿ ಲಾಯಕಾಗುವಂತೆ ಗುಣಿಗಳನ್ನ ಮುಚ್ಚಿಸಬೇಕು ಇಜಾರದಾರನು ಯಾವ ಪ್ರದೇಶದಲ್ಲಿ ಜಮಾಯಿಸುತ್ತಾನೆಯೋ ಗ್ರಾಮ ಕಲ್ಲಿನ ಮೊತ್ತ ಯಾವ ಸ್ಥಳಕ್ಕೆ ರವಾನೆ ಮಾಡುತ್ತಾನೋ ಈ ವಗ್ಗೈರೆ ತಪ್ಪೀಲ್ ಕಂಡು ಅಮಲ್‌ದಾರ್ರಿಂದ ಮಾಫು ಲೈಸೆನ್ಸು ಪಡದು ರವಾನಿಸಬೇಕು ಲೈಸೆನ್ಸು ಇಲ್ಲದೆ ರವಾನಿಸಕೂಡದು ಈ ಮೇರಿಗೆ ತಿಳಿಯಪಡಿಸಿ ಅಧೆ.

ಬಿ. ಜಿ. ಕೃಷ್ಣಯ್ಯಂಗಾರ್,
ಆ|| ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟು.

1896ನೇ ಇಸವಿ ಮೇ ತಾರೀಖು ರಲ್ಲಿ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಮತ್ತು ಮದ್ದಗಿರಿ ಡಿಪೋದಲ್ಲಿರುವ ಈ ಕೆಳಗೆ ನಮೂದಾಗುವ ಸಾಮಾನುಗಳನ್ನು 1896ನೇ ಇಸವಿ ಜೂನ್ 15ರಲ್ಲಿ ತುಮಕೂರು ಡಿಪೋದಲ್ಲಿಯೂ 19ರಲ್ಲಿ ಮದ್ದಗಿರಿ ಡಿಪೋದಲ್ಲೂ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.

ತುಮಕೂರು ಡಿವ್ಹೀ.

ತರಹ.	ಸಂಖ್ಯೆ.	ಸಲ. ಅಡಿ.	ಅಂಗುಲ.	ಸೆಪ್ಸ್.	ಪರಾ.
ತ್ಯಾಗ	226	159	5	..	ಹೆಚ್ಚು ಕಡಮೆ.
ಅಳತೇಕಾಯಿ	32 ಮಣ	...	...	...	ಡಿಟೋ

ಮದ್ದಗಿರಿ ಡಿವ್ಹೀ.

ತ್ಯಾಗ	365	320	3	3	ಡಿಟೋ
ಹುಲಿವೆ	1	..	8	0	

ಹರಾಜು ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಪರತ್ತುಗಳು.—ಹರಾಜು ಖೈದಾದ ಕೂಡ್ಲೆ ಕಾಲುಹಿಸ್ಸೆ ಮೊಬಲಗು ಕೇವಣಿ ತರ್ಕ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ಹರಾಜು ತಾರೀಖು ಲಾಗಾಯತು 1 ವಾರದ ವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೆ ಹರಾಜು ಮಾಡಲ್ಪಡುವದಲ್ಲದೆ ಲುಕ್‌ಸಾನಿಗೆ ಮೊದಲು ಹರಾಜುದಾರನ್ನು ಗುರಿಮಾಡಲ್ಪಡುತ್ತೆ. ಸಾಮಾನುಗಳನ್ನೆಲ್ಲಾ ಹರಾಜು ತಾರೀಖು ಲಾಗಾಯತು 10 ದಿವಸದ ವಳಗಾಗಿ ಸಾಗಿಸಿಕೊಳ್ಳಬೇಕು. ಇತರ ತಪ್ಸೀಲಿಗಾಗಿ 1895ನೇ ಇಸವಿ ಏಪ್ರಿಲ್ 25ನೇ ಮತ್ತುಂ ಮೈಸೂರ ಗೆಜಿಟ್ 1ನೇ ಭಾಗದಲ್ಲಿ ಪ್ರಕಟಿಸಿರುವ 1895ನೇ ಇಸವಿ ಮಾರ್ಚಿ 15ನೇ ಮತ್ತುಂ 15229ನೇ ನಂಬರ ಗವರ್ನಮೆಂಟ್ ನೋಟಿಫಿಕೇಷನ್ ನೋಡಿ.

ಎಂ. ವೆಂಕಟನಾರಣಪ್ಪ,
ಡಿ|| ಫಾರೆಸ್ಟ್ ಆಫಿಸರ್.

1896ನೇ ಇಸವಿ ಮಾರ್ಚಿ ತಾರೀಖು 12ರಲ್ಲಿ ನಡೆದ ತುಮಕೂರು ಡಿಸ್ಟ್ರಿಕ್ಟ್ ಲೋಕಲ್ ಫಂಡ್ ಬೋರ್ಡು ಮೀಟಿಂಗಿನ ತೀರ್ಮಾನಗಳು.

ಹಾಜರು.

ಉದ್ಯೋಗಸ್ಥರು.

1. ಪ್ರೆಸಿಡೆಂಟ್ ಮಾ|| ರಾ|| ರಾ|| ಎಂ. ನಾರಾಯಣರಾಯರವರು.
2. ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮಾ|| ರಾ|| ಪಿ. ವೆಂಕಟರಾಯರವರು.
3. ಎಕ್ಸಿಕ್ಯೂಟಿವ್ ಇಂಜಿನಿಯರ್ ಮಾ|| ರಾ|| ಬಿ. ಪಿ. ರಾಘವಲೂನಾಯಡರವರು.
4. ತುಮಕೂರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಸರ್ಜ್ಯನ್ ಮಾ|| ರಾ|| ಟಿ. ಯಸ್. ನಂಜಪ್ಪನವರು.
5. ಪಾವಗಡದ ತಾಲ್ಲೂಕು ಅಮಲ್ದಾರ್ ಮಾ|| ರಾ|| ರಾಘವೇಂದ್ರರಾಯರು.
6. ತುಮಕೂರ್ ತಾಲ್ಲೂಕು ಅಮಲ್ದಾರ್ರು ಮೆ|| ಮಾಪಂವುದಿ ರಜಾಸಾಹೆಬರವರು.
7. ಮದ್ದಗಿರಿ ತಾಲ್ಲೂಕು ಅಮಲ್ದಾರ್ರು ಮಾ|| ರಾ|| ಚವ್ವಡಯ್ಯನವರು.
8. ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್ದಾರ್ರು ಮಾ|| ರಾ|| ಕಂಠೀರವಾಚಾರ್ರು.
9. ಕೀರ್ಯದ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ರು ಮಾ|| ರಾ|| ತಿರುಮಾರಣಯ್ಯಂಗಾರ್ರು.
10. ಗುಬ್ಬೀ ತಾಲ್ಲೂಕು ಅಮಲ್ದಾರ್ರು ಮಾ|| ರಾ|| ಪಿ. ಸೀತಾರಾಮಯ್ಯನವರು.
11. ತಿಪಟೂರ್ ತಾಲ್ಲೂಕು ಆಮಲ್ದಾರ್ರು ಮಾ|| ರಾ|| ಬಿ. ಸೀತಾರಾಮಯ್ಯನವರು.

ಗೈರ್ ಹಾಜರ್.

1. ಕುಣಿಗಲ್ ತಾಲ್ಲೂಕು ಅಮಲ್ದಾರ್ರು ಮಾ|| ರಾ|| ಪಾರ್ಥಸಾರಥಯ್ಯಂಗಾರ್ರು (ಕಾಯಿಲೆ ಬೇಕಿಯಿಂದ.)

ಇತರ ಮೆಂಬರುಗಳು.

1. ಮಾ|| ರಾ|| ರಾಮದಾಸಪ್ಪನವರು.
2. ಮಿಸ್ಟರ್ ಆಬೇದಲ್ಲೀ ಸಾಹೆಬರವರು.
3. ಮಾ|| ರಾ|| ಆಗೇ ಕೃಷ್ಣಪ್ಪನವರು.
4. ಶ್ರೀಮತು ಗಂಗಂಣಶಟ್ಟರು.
5. ಶ್ರೀಮತು ಚಿಕ್ಕಂಣಶಟ್ಟರು.

ಗೈರ್ ಹಾಜರ್.

1. ಶ್ರೀವರ್ವೆಂಬಾರ್ ಶ್ರೀನಿವಾಸಕಾತಾಚಾರ್ಯ (ಕೌಂಗಸರು ಮಕ್ಕಳು ಕಾಹಿಲೆ ಸಬಬಿನಿಂದ.)

2. ಮೆಸ್ಸರ್ ಸೈಯದ್ ಮುಸ್ತಫಾಸಾಹೆಬರವರು (ಕಾಹಿಲೆ ದೆಕೆಯಿಂದ.)

1. ಮುಸಾಫರ್ ಖಾನೆಗಳಲ್ಲಿ ರಾತ್ರೀಕಾಲದಲ್ಲಿ ದೀಪ ಇಡತಕ್ಕ ಬಗ್ಗೆ ಬೇರೇ ಮೊಬಲಗು ಮಂಜೂರ್ಮಾಡತಕ್ಕದ್ದು ನಿಷ್ಕಾರಣ ವ್ಯಯವೆಂತಲೂ ಇದಕ್ಕೆ ಬದಲಾಗಿ ಕೆಲವು ಭಾರಿ ಕೆಲಸುಳ್ಳ ದೀಪಸ್ತಂಭಗಳನ್ನ ಖರೀದಿಗೆ ತೆಗದು ಮುಸಾಫರ್ಖಾನೆ ಕಾವಲಿಗಾರನ ಸ್ವಾಧೀನಕೊಟ್ಟು ಪ್ರಯಾಣೀಕರು ರಾತ್ರಿ ಮೊಕ್ಕಾಂ ಮಾಡಿಕೊಂಡಂಥಾವರಿಗೆ ಪುದಯೋಗಕ್ಕೆ ಕೊಟ್ಟದ್ದು ವಾಪಸ್ ತೆಗದುಕೊಳ್ಳು ವಂತೆ ಪ್ರತಿ ಮುಸಾಫರ್ಖಾನೆಯಲ್ಲಿಯೂ ಯೇರ್ಪಾಟು ಮಾಡತಕ್ಕದ್ದೆಂದೂ ಸಹ ಸಾದರಾದ 1895ನೇ ಇಸವಿ ಡಿಸೆಂಬರ್ 21ನೇ ಮುಕ್ತಂ 7189—97 ಎಲ್. ಎಫ್. 71—94ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸನ್ನು ವೋದಲಾಯಿತು, ತವರದ ದೀಪ ಸ್ತಂಭಗಳು ಜಾಗ್ರತೆಯಲ್ಲಿ ಮುರದು ಹೋಗುವ ಪ್ರಯುಕ್ತ ಪ್ರತಿ ಮುಸಾಫರ್ಖಾನೆಗೂ 6 ರೂಪಾಯಿಗೆ ಮಿಕರದೆ ಯಿರುವಂತೆ ಹಿತ್ತಾಳೇ ಅಣಸು ವುಳ್ಳ ಹಣತೆಗಳು ಯರಡು ಅವುಗಳಿಗೆ ಮರದ ಸ್ಟಾಂಡು ಯರಡು ಮತ್ತು ಹಿತ್ತಾಳೆ ಕೈ ಹಣತೆಗಳು ಯರಡು ಖರೀದಿಗೆ ತಗಯಬೇಕೆಂತಲೂ ಇದರ ಖರ್ಚು ಖಾಲ್ತಿಸಾಲಿನ ಮಿಸ್ಸಿಲ್ಲಿ ಫಂಡು ಬಜೆಟ್ಟಿನಲ್ಲಿ ವೈಯುವ ಜನರಲ್ ಕೀವಿಂಗ್ಸ್‌ನಲ್ಲಿ ಮಂಜೂರ್ಮಾಡಬೇಕೆಂತಲೂ ತೀರ್ಮಾನ ಮಾಡಲ್ಪಟ್ಟಿತು.

2. ರೆವಿನ್ಯೂ ಇಲಾಖೇ ಮಾರೀಫತ್ತು ನಡೆಯತಕ್ಕ ಮರಹವ್ಮತ್ ಕಾಮುಗಾರಿಗಳ ವಿಚಾರದಲ್ಲಿ ಮ್ಯುನಿಸಿಪಲ್ ಮತ್ತು ಲೋಕಲ್‌ಫಂಡು ಬೋರ್ಡ್‌ಗಳ ಪ್ರೆಸಿಡೆಂಟರಿಗೆ ಮಂಜೂರ್ಮಾಡತಕ್ಕ ಅಧಿಕಾರ 200 ರೂಪಾಯಿಗೆ ಬದಲಾಗಿ 500 ರೂಪಾಯಿಗಳ ವರಗಾಗಿ ಮಾಡಬಹುದೆಂದು ಅಧಿಕಾರ ಹೆಚ್ಚಿಸಿ ಸಾದರಾದ 1896ನೇ ಇಸವಿ ಫಿಬ್ರವರಿ 8ನೇ ಮುಕ್ತಂ 9177—85 ಎಲ್. ಎಫ್. 137—92ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸನ್ನ ವೋದಲಾಯಿತು ಇದನ್ನ ರಿಕಾರ್ಡು ಮಾಡಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

3. ವೈದ್ಯಶಾಲೆಗಳ ವಿಚಾರದಲ್ಲಿ ಯೇನೂ ಹೆಚ್ಚು ಯೇರ್ಪಾಡುಗಳು ನಡಸತಕ್ಕ ಸಂದರ್ಭಗಳಿಲ್ಲವೂ ಆ ಇಲಾಖೆ ಮುಖ್ಯಸ್ಥರಾದ ಸೀನಿಯರ್ ಸರ್ಜನ್ ಸಾಹೆಬರವರ ಮೂಲಕ ಡೆಪ್ಯುಟಿ ಕಮ್ಮಿಷನರ್‌ಗಳು ಗವರ್ನಮೆಂಟಿಗೆ ಜಾಹಿರ್ ಮಾಡಬೇಕೆಂದು ಸಾದರಾದ 1895ನೇ ಇಸವಿ ಡಿಸೆಂಬರ್ 20ನೇ ಮುಕ್ತಂ 7128—36 ಎಲ್. ಎಫ್. 78—94ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಗ್ಸನ್ನ ವೋದಿ ರಿಕಾರ್ಡು ಮಾಡಲ್ಪಟ್ಟಿತು.

4. ಮೈಸೂರು, ಶಿವಮೊಗ್ಗ ವಿನಹ ಸಂಸ್ಥಾನ ಮುಳೆಯ ಮಿಸ್ಸಿಲ್ಲುಗಳಿಗೆ ವಬ್ಬ ವಬ್ಬ ರಿಲೀವಿಂಗ್ ಮುಂಶ್ಯಾನಿಯ ಮೊಕರರಾತಿಯನ್ನ ಮಂಜೂರ್ಮಾಡಿರುವದಾಗಿ ಸಾದರಾದ 1896ನೇ ಇಸವಿ ಜನವರಿ 21ನೇ ಮುಕ್ತಂ 8274—83 ಎಲ್. ಎಫ್. 55—93ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸನ್ನ ವೋದಲಾಯಿತು, ಕೂಡಿದ ಮಟ್ಟಿನ ಜಾಗ್ರತೆಯಲ್ಲಿ ವಬ್ಬ ಕಯಾರಾದ ಮುಂಶ್ಯಾನಿಯನ್ನ ಈ ಮಿಸ್ಸಿಲ್ಲಿಗೆ ಕಳುಹಿಸಿಕೊಡಬೇಕೆಂದು ಸೀನಿಯರ್ ಸರ್ಜನ್ ಸಾಹೆಬರವರಿಗೆ ಬರಸತಕ್ಕದ್ದೆಂದು ತೀರ್ಮಾನ ವಾಡಲ್ಪಟ್ಟಿತು.

5. 1—2—3ನೇ ತರಗತಿಗಳ ಮುಸಾಫರ್ಖಾನೆಗಳ ನಿಕರವಾದ ನಕ್ಷೆಗಳು ಮತ್ತು ಅಂದಾಜುಗಳನ್ನ ವಬ್ಬರುವದಾಗಿ ಸಾದರಾದ 1896ನೇ ಇಸವಿ ಜನವರಿ 20ನೇ ಮುಕ್ತಂ 8204—13 ಯಲ್. ಯಫ್. 50—94ನೇ ನಂಬರು ಗವರ್ನಮೆಂಟ್ ಆರ್ಡರನ್ನ ವೋದಲಾಯಿತು. ಸ್ಥಳಾನುಕೂಲ್ಯತೆಗೆ ಅನುಸಾರವಾಗಿ ಅಲ್ಪ ಬದಲಾವಣೆಯಿಂದ ತೀರ್ಥದಲ್ಲಿ 1ನೇ ತರಗತಿ ಮುಸಾಫರ್ಖಾನೆಯನ್ನ ಹುಳಿಯಾರ—ಹುಲಿಯೂರು ದುರ್ಗದಲ್ಲಿ 3ನೇ ತರಗತಿ ಮುಸಾಫರ್ಖಾನೆಗಳನ್ನ ಕಟ್ಟತಕ್ಕದ್ದೆಂದು ಏಕಮತ್ಯವಾಗಿ ತೀರ್ಮಾನಿಸಲ್ಪಟ್ಟಿತು. ಗವರ್ನಮೆಂಟಿಗೆ ಕೂಡ್ಲೆ ಬರಸಿ ಅಪ್ಪಣೆ ಪಡದು ಈ ಕೆಲಸಗಳಿಗೆ ಕೂಡ್ಲೆ ಪುರುಮಾಡಿಸತಕ್ಕದ್ದೆಂತಲು, ತೀರ್ಥದಲ್ಲಿ ಹಾಲಿ ಯಿರುವ ಮುಸಾಫರ್ಖಾನೇ ಪ್ರದೇಶದಲ್ಲೇ ತಾಲ್ಲೂಕು ಕಚ್ಚೇರಿ ಯವರುನಲ್ಲಿ ಮುಸಾಫರ್ಖಾನೆ ಆಗತಕ್ಕದ್ದೆಂತಲು ಹುಳಿಯಾರದಲ್ಲಿ ಮುಸಾಫರ್ ಬಂಗಲೆಗೂ ಆಸ್ಪತ್ರೆಗೂ ಮಧ್ಯೆ ಅನುಕೂಲವಾದ ಜಾಗಾ ಮುಸಾಫರ್ಖಾನೆಗೆ ಆಯಾಯಿಸತಕ್ಕದ್ದೆಂತಲೂ, ಹುಲಿಯೂರು ದುರ್ಗದಲ್ಲಿ ಮುಸಾಫರ್ಖಾನೆಗೆ ಜಾಗವನ್ನ ಮ್ಯುನಿಸಿಪಲ್ ಮೆಂಬರುಗಳ ಕೂಡಾ ಅಮಲ್ದಾರ್ರು ಆಲೋಚಿಸಿ ಆಯಾಯಿಸಬೇಕೆಂತಲೂ ಸಹ ತೀರ್ಮಾನವಾಯಿತು.

6. ಮುಸಾಫರ್ಖಾನೆಗಳಿಗೆ ಯಾವ ವಿಧವಾದ ಫೀಜನ್ನೂ ವಸೂಲ್ಮಾಡತಕ್ಕ ಪದ್ಧತಿಯನ್ನ ಜಾರಿಯಲ್ಲಿ ತರತಕ್ಕದ್ದಕ್ಕೆ ಅಂಥಾ ಕಾರಣಲಿಲ್ಲವೆಂದುನ್ನೂ ಸರಕಾರದ ನೌಕರರು ದಫಾ 1ಕ್ಕೆ ಮೂರು ದಿವಸಗಳಿಗಿಂತಲು ಅಧಿಕವಾಗಿ ಡೆಪ್ಯುಟಿ ಕಮ್ಮಿಷನರವರ ಅಪ್ಪಣೆ ಪಡೆಯದೆ ಮುಸಾಫರ್ಖಾನೆಗಳಲ್ಲಿ ಇರಕೂಡದೆಂದು ಸಾದರಾದ 1896ನೇ ಇಸವಿ ಜನವರಿ 22ನೇ ಮುಕ್ತಂ 8346—83 ಯಲ್. ಯಫ್. 76—94ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್ ವೋದಿ ರಿಕಾರ್ಡು ಮಾಡಲ್ಪಟ್ಟಿತು.

7. ಹಿಂದಿನ ಸಾಲ್‌ಗಳಲ್ಲಿ ಲೋಕಲ್ ಫಂಡು ಜನರಲ್‌ನಿಂದ ಮಂಜೂರಾಗಿದ್ದ ಬಾಬತು ಅಪೂರ್ತಿಯಾದ ಕಾಮುಗಾರಿಗಳ ಪಟ್ಟಿಯನ್ನ ಮಂಜೂರ್ಮಾಡಿ ಖಾಲ್ತೀ ಸಾಲ್‌ನಲ್ಲಿ ಅವುಗಳು ಪೂರ್ತಿಸತಕ್ಕದ್ದಕ್ಕೋಸ್ಕರ ಸದರೀ ಫಂಡಿನಿಂದ 1201 ರೂಪಾಯಿಗಳನ್ನ ಅಪ್ಪಣೆ ಬಯಬಾಲಿಸಿರುವದಾಗಿ ಸಾದರಾದ 1896ನೇ ಇಸವಿ ಜನವರಿ 17ನೇ ಮರಕುಂ 7985—7 ಯಲ್. ಯಫ್. 61—95ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸನ್ನ ವೋದಿ ರಿಕಾರ್ಡು ಮಾಡಲ್ಪಟ್ಟಿತು.

8. ತುಮಕೂರು, ಮದ್ದೂರು ರಸ್ತೆ ಬೈಕಿ ತುಮಕೂರು, ಶಾಣಿಕಲ್ ಸೆಕ್ಷನನ್ನು ಪ್ರೊವಿಷಲ್ ರಸ್ತೆಯನ್ನಾಗಿ ಭೂಮಿನ ಕೀರಿಸಿಕೊಳ್ಳಬೇಕೆಂಬ ಅಪೇಕ್ಷೆಗೆ ಸಾಕಾದ ಕಾರಣವಿಲ್ಲವೆಂದು ಪಟ್ಟ ಚೀಫ್ ಯಿಂಜಿನಿಯರ್ ಸಾಹೆಬರವರ ಅಭಿಪ್ರಾಯವನ್ನು ಗವರ್ನಮೆಂಟಿನವರು ಅನುಮೋದಿಸಿ, ಸಕಾಲದಲ್ಲಿ ರಿಫೇರಿಗಳು ನಡಿಸಿ ವೈಕ್ತವಾದ ಮೊಬಲಗು ಖರ್ಚಿನಿಂದ ಕ್ರಮಪಡಿಸಿಕೊಂಡಿದ್ದರೆ ಪ್ರಸಕ್ತವಾದ ಕೆಟ್ಟಸ್ಥಿತಿಯು ರಸ್ತೆಗೆ ಪುಂಟಾಗುತ್ತಿರಲಿಲ್ಲವೆಂದು ಸಾದರಾದ 1895ನೇ ಇಸವಿ ಡಿಸೆಂಬರು 18ನೇ ಮುಕ್ತಂ 7043—4 ಯಲ್. ಯಫ್. 145—94ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸನ್ನು ಮತ್ತು ಯಿದೇ ವಿಚಾರದಲ್ಲಿ 1895ನೇ ಇಸವಿ ಡಿಸೆಂಬರ್ 21ನೇ ಮುಕ್ತಂ 6442ನೇ ನಂಬರು ಚೀಫ್ ಇಂಜಿನಿಯರ್ ಸಾಹೆಬರವರ ಮಿಮೋರಾಂಡಮ್‌ವನ್ನ ಮಲಪ್ಪುಪಿಸಿ ಯಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರಿಂದ ಬಂದ 1895ನೇ ಇಸವಿ ಡಿಸೆಂಬರು 26ನೇ ಮುಕ್ತಂ 1612ನೇ ನಂಬರು ಪತ್ರವನ್ನಲ್ಲಿ ಈರಸ್ತೆಗೆ ಮಂಜೂರಾಗಿರತಕ್ಕ ಸಾರಾಬಾದು ಮೊಬಲಗಿಗೆ ಬದಲಾಗಿ ಮೈಲಿವಂದಕ್ಕೆ 150 ರೂಪಾಯಿನಂತೆ ಕೊಡಿಸಬೇಕೆಂದು ಕೇಳಿರುವ ಕೋರಿಕೆಯನ್ನ ಸಹ ವೋದಲಾಯಿತು. ಕೆಟ್ಟುಯಿರುವದಾಗಿ ಹೆಳುವ ರಸ್ತೆ ಭಾಗಗಳನ್ನ ಸರಿಯಾಗಿ ದುರಸ್ತು ಪಡಿಸಲು ಒಂದು ಸ್ಪೆಷಲ್ ರಿಫೇರೀ ಅಂದಾಜುವನ್ನ ತಯಾರ್ಮಾಡಿಸತಕ್ಕದ್ದಕ್ಕಾಗಿ ಯಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರಿಗೆ ಬರಸತಕ್ಕದ್ದೆಂದು ತೀರ್ಮಾನಿಸಲ್ಪಟ್ಟಿತು.

ಯಂ. ನಾರಾಯಣರಾವ್, ಫಾರ್ ಲೋಕಲ್ ಫಂಡ್ ಬೋರ್ಡು ಪ್ರೆಸಿಡೆಂಟ್.